ಆ) 08 02 2001ರಲ್ಲಿ 55 ಲಕ್ಷ ರೂಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ 28 05 2002 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ

ಇ) ಅನುದಾನದ ಲಭ್ಯತೆ ಇರದಿರುವುದರಿಂದ ವಿಳಂಬವಾಗಿರುತ್ತದೆ

ಈ) 2006–07ನೇ ಸಾಲಿನಲ್ಲಿ 5 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ ಈಗ ಪುನಃ 20 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗುತ್ತಿದೆ 07–08 ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನಾಧರಿಸಿ ಕಟ್ಟಡವನ್ನು ಪೂರ್ಣಗೊಳಿಸಲಾಗುವುದು

1059 (1272) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006–07ನೇ ಸಾಲಿನಲ್ಲಿ ಡಿಸೆಂಬರ್–06 ಮಾಹೆಯೊಳಗೆ ಸಾಧಿಸಿದ ವಿವಿಧ ಯೋಜನೆಗಳ ಗುರಿ ಎಷ್ಟು,

ಆ) ಇವುಗಳು ಸಾಧಿಸಿರುವ ಶೇಕಡಾವಾರು ಪ್ರಗತಿ ಎಷ್ಟು, (ಯೋಜನೆವಾರು ಪ್ರತ್ಯೇಕ ವಿವರ ಒದಗಿಸುವುದು),

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006–07ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗಾಗಿ ನಿಗದಿಪಡಿಸಿದ ಭೌತಿಕ ಗುರಿ ,ಮತ್ತು ಆರ್ಥಿಕ ಗುರಿ ಹಾಗೂ ಡಿಸೆಂಬರ್ 2006ರ ಮಾಹೆಯೊಳಗೆ ಸಾಧಿಸಿದ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	ವಾರ್ಷಿಕ ಗುರಿ		ಸಾಧನೆ		ಗುರಿ ಹಾಗೂ ಸಾಧನೆಯ ಮೇಲೆ ಶೇಕಡಾವಾರು (%)	
		ಭೌತಿಕ ಗುರಿ	ಆರ್ಥಿಕ ಗುರಿ	ಭೌತಿಕ	ಆರ್ಥಿಕ		
1	2	3	4	5	6	5/3	6/4
	ಪರಿಶಿಷ್ಟ ಜಾತಿ						
1	ಗಂಗಾ ಕಲ್ಯಾಣ ಯೋಜನೆ (6 ಬಾವಿಗಳು)	300	349 75	21	66 13	7	19
2	ವೈಯಕ್ತಿಕ ನೀರಾವರಿ ಯೋಜನೆ	3826	4859 83	3396	2504 38	89	52
	ಹೆಚ್ಚುವರಿ ಗುರಿ	6174	–		–	–	–
3	ಭೂ ಒಡೆತನ ಯೋಜನೆ	3247	1237 60	1091	354 34	34	29
4	ಸ್ವಯಂ ಉದ್ಯೋಗ	10020	1444 60	5401	868 85	54	60
5	ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ	–	1554 00	1191	154 18	–	10
6	ಮಹಿಳಾ ಸಮೃದ್ಧಿ ಯೋಜನೆ (ಮೈಕ್ರೋ ಕ್ರೆಡಿಟ್ ಯೋಜನೆ)	2000	200 00	2194	130 50	110	65
	ಒಟ್ಟು (1)	25567	9645 78	13294	4078 38	52	42
	ಪರಿಶಿಷ್ಟ ವರ್ಗ						
1	ಗಂಗಾ ಕಲ್ಯಾಣ ಯೋಜನೆ (2 ಬಾವಿಗಳು) ಘಟಕ	300	436 98	10	82 98	3	19
	ಎಸ್ ಸಿ ಎ ಯಿಂದ ಟಿ ಎಸ್ ಪಿ (ಗಂ ಕ ಯೋ–1 ಬಾವಿ)	–	–	3	5 43	–	–
	ಎಸ್ ಸಿ ಎ ಯಿಂದ ಟಿ ಎಸ್ ಪಿ (ವೈ ನೀ ಯೋ 5 ಬಾವಿಗಳು)	–	–	5	7 40	–	–
2	ವೈಯಕ್ತಿಕ ನೀರಾವರಿ ಯೋಜನೆ	5359	3982 15	1374	920 31	26	23
	ಹೆಚ್ಚುವರಿ ಗುರಿ	1279	–	–	–	–	–
3	ಭೂ ಒಡೆತನ ಯೋಜನೆ	1085	399 27	153	85 05	14	21

4	ಸ್ವಯಂ ಉದ್ಯೋಗ	3740	456 10	5785	385 70	155	85
	ಒಟ್ಟು (2)	11763	5274 50	7330	1486 87	62	28
	ಒಟ್ಟು (1+2)	37330	14920 28	20624	5565 25	55	37

(ಎಕರೆಗಳಲ್ಲಿ)

					ಪ ಜಾತಿ	ಪ ವರ್ಗ
			ಭೂ ಒಡೆತನ	ಖುಷ್ಕಿ	1826 36	282 05
				ತರಿ	307 21	27 41

ಷರಾ 1 ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ಗುರಿಯನ್ನು ನಿಗದಿಪಡಿಸಿರುವುದಿಲ್ಲ ನಗರಾಭಿವೃದ್ಧಿ ಇಲಾಖೆಯು ಗುರುತಿಸಿದ ಸ್ಕ್ಯಾವೆಂಜರ್‌ಗಳಿಗೆ 2006–07ನೇ ಸಾಲಿನ ಬಾಕಿ ಹಣದಿಂದ ಪುನರ್ವಸತಿ ಕಲ್ಪಿಸಲಾಗುತ್ತಿದೆ

2 ಗಂಗಾ ಕಲ್ಯಾಣ ಯೋಜನೆಯ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಯಲು ಗುರಿ ಹಮ್ಮಿಕೊಳ್ಳಲಾಗಿದೆ

3 ಇದಲ್ಲದೆ ಪರಿಶಿಷ್ಟ ಜಾತಿಗೆ ರೂ 1343 42 ಲಕ್ಷ ಅವಧಿ ಸಾಲ ಮತ್ತು ಪರಿಶಿಷ್ಟ ವರ್ಗಕ್ಕೆ ರೂ 114 40 ಲಕ್ಷ ಅವಧಿ ಸಾಲವನ್ನು ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆದು ಸಾಲ ನೀಡಿದೆ

ಇ) 2006–07ನೇ ಸಾಲಿನಲ್ಲಿ ನಿಗದಿಪಡಿಸಿರುವ ಗುರಿಯನ್ನು ಮಾರ್ಚ್ 2007ನೇ ಮಾಹೆಯ ಅಂತ್ಯದೊಳಗೆ ಸಾಧಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು

1060 (1052) ಶ್ರೀ ಜೀವಿಜಯ ಬಿ ಎ (ಸೋಮವಾರ ಪೇಟೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಸುಂಟಿಕೊಪ್ಪ ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ,